All India Radio: Bangalore
National Bulletin In Kannada
18.12.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

- ಓಮನ್ ರಕ್ಷಣಾ ವ್ಯವಹಾರಗಳ ಉಪ ಪ್ರಧಾನಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ
- ದ್ವಿಪಕ್ಷೀಯ ಕೃಷಿ ಸಂಶೋಧನೆ ಮತ್ತು ತಂತ್ರಜ್ಞಾನ ವಿನಿಮಯ ಹೆಚ್ಚಿಸಲು ೨೦೨೫-೨೮ರ ಕಾರ್ಯ ಯೋಜನೆಗೆ ಭಾರತ, ಅರ್ಜೆಂಟೀನಾ ಸಹಿ
- ಇಂದಿನಿಂದ ಭಾರತ-ಯುಎಇ ಜಂಟಿ ಮಿಲಿಟರಿ ಸಮರಾಭ್ಯಾಸ
- ದಟ್ಟ ಮಂಜಿನ ಹಿನ್ನೆಲೆಯಲ್ಲಿ ಭಾರತ-ದಕ್ಷಿಣ ಆಫ್ರಿಕಾ ನಡುವಿನ ನಾಲ್ಕನೇ ಟಿ-೨೦ ಪಂದ್ಯ ರದ್ದು

<><><><>

ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮೂರು ರಾಷ್ಟ್ರಗಳ ಪ್ರವಾಸದ ಕೊನೆಯ ಚರಣದಲ್ಲಿ ಎರಡು ದಿನಗಳ ಓಮನ್ ಭೇಟಿಗಾಗಿ ನಿನ್ನೆ ಸಂಜೆ ಮಸ್ಕತ್ ತಲುಪಿದರು. ಜೋರ್ಡಾನ್ ಮತ್ತು ಇಥಿಯೋಪಿಯಾಗೆ ಯಶಸ್ವಿ ಭೇಟಿಗಳನ್ನು ಪೂರ್ಣಗೊಳಿಸಿದ ನಂತರ ಅವರು ಓಮನ್ ತಲುಪಿದರು. ಮಸ್ಕತ್ ವಿಮಾನ ನಿಲ್ದಾಣದಲ್ಲಿ, ಪ್ರಧಾನಿ ಮೋದಿ ಅವರನ್ನು ಓಮನ್‌ನ ರಕ್ಷಣಾ ವ್ಯವಹಾರಗಳ ಉಪ ಪ್ರಧಾನಿ ಸಯ್ಯದ್ ಶಿಹಾಬ್ ಬಿನ್ ತಾರಿಕ್ ಅಲ್ ಸೈದ್ ಬರಮಾಡಿಕೊಂಡರು. ವಿವಿಧ ಕ್ಷೇತ್ರಗಳಲ್ಲಿ ಭಾರತ-ಓಮನ್ ಸಹಕಾರವನ್ನು ಬಲಪಡಿಸುವ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ಮುನ್ನಡೆಸುವ ಕುರಿತು ಅವರು ಚರ್ಚೆ ನಡೆಸಿದರು. ಓಮನ್ ಮುಖ್ಯಸ್ಥ ಸುಲ್ತಾನ್ ಹೈಥಮ್ ಬಿನ್ ತಾರಿಕ್ ಅವರ ಆಹ್ವಾನದ ಮೇರೆಗೆ ಪ್ರಧಾನಿಯವರು ಭೇಟಿ ನೀಡಿದ್ದಾರೆ. ಇಂದು, ಭಾರತ ಮತ್ತು ಓಮನ್ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ ಏರ್ಪಡಲಿದೆ.

ಓಮನ್ ಸುಲ್ತಾನ್ ಮತ್ತು ಪ್ರಧಾನಿ ಮೋದಿ ಅವರ ಸಮ್ಮುಖದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹಾಗೂ ಓಮನ್ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಕೈಸ್ ಅಲ್ ಯೂಸೆಫ್ ಇದಕ್ಕೆ ಸಹಿ ಹಾಕಲಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು, ಓಮನ್ ಭಾರತದೊಂದಿಗೆ ಶಾಶ್ವತ ಸ್ನೇಹ ಮತ್ತು ಆಳವಾದ ಐತಿಹಾಸಿಕ ಸಂಪರ್ಕ ಹೊಂದಿದೆ. ಈ ಭೇಟಿಯು ಸಹಯೋಗದ ಹೊಸ ಮಾರ್ಗಗಳನ್ನು ಅನ್ವೇಷಿಸಲು ಮತ್ತು ಎರಡೂ ದೇಶಗಳ ನಡುವಿನ ಪಾಲುದಾರಿಕೆಗೆ ಹೊಸ ಆವೇಗವನ್ನು ನೀಡಲು ಅವಕಾಶವನ್ನು ನೀಡುತ್ತದೆ ಎಂದು ಹೇಳಿದ್ದಾರೆ. ಎರಡು ದಿನಗಳ ಭೇಟಿಯ ಸಮಯದಲ್ಲಿ, ಪ್ರಧಾನಿ ನರೇಂದ್ರ ಮೋದಿಯವರು, ಓಮನ್ ಸುಲ್ತಾನರನ್ನು ಅವರ ಅರಮನೆಯಲ್ಲಿ ಭೇಟಿಯಾಗುವುದರ ಜೊತೆಗೆ, ಎರಡೂ ದೇಶಗಳ ವ್ಯಾಪಾರ ನಾಯಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ಅವರು ವಿದ್ಯಾರ್ಥಿಗಳು ಮತ್ತು ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಹ ಸಂವಹನ ನಡೆಸಲಿದ್ದಾರೆ. ಓಮನ್‌ನಲ್ಲಿರುವ ಅನೇಕ ಭಾರತೀಯ ವಿದ್ಯಾರ್ಥಿಗಳು ಪ್ರಧಾನಿಯವರ 'ಪರೀಕ್ಷಾ ಪೆ ಚರ್ಚಾ' ಅನ್ನು ಆಲಿಸಲಿದ್ದಾರೆ. ವಿಶೇಷವಾಗಿ ಭಾರತ ಮತ್ತು ಓಮನ್ ತಮ್ಮ ರಾಜತಾಂತ್ರಿಕ ಸಂಬಂಧಗಳ ಸ್ಥಾಪನೆಯ ೭೦ ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ವರ್ಷದಲ್ಲಿ ಇದು ದೀರ್ಘಕಾಲದ ಮತ್ತು ಐತಿಹಾಸಿಕ ಪಾಲುದಾರರೊಂದಿಗೆ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

<><><>

ದ್ವಿಪಕ್ಷೀಯ ಕೃಷಿ ಸಂಶೋಧನೆ ಮತ್ತು ತಂತ್ರಜ್ಞಾನ ವಿನಿಮಯವನ್ನು ಹೆಚ್ಚಿಸಲು ಭಾರತ ಮತ್ತು ಅರ್ಜೆಂಟೀನಾ, ೨೦೨೫-೨೭ರ ಕಾರ್ಯ ಯೋಜನೆಗೆ ಸಹಿ ಹಾಕಿವೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಅರ್ಜೆಂಟೀನಾದ ರಾಷ್ಟ್ರೀಯ ಕೃಷಿ ತಂತ್ರಜ್ಞಾನ ಸಂಸ್ಥೆ ನಡುವೆ ಸಹಿ ಹಾಕಲಾದ ಈ ಕಾರ್ಯ ಯೋಜನೆಯು, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಶೂನ್ಯ ಬೇಸಾಯ, ಯಾಂತ್ರೀಕರಣ, ಸೂಕ್ಷ್ಮ ನೀರಾವರಿ ಸೇರಿದಂತೆ ಸುಸ್ಥಿರ ಕೃಷಿ ವಿಜ್ಞಾನದಾದ್ಯಂತ ಸಹಯೋಗವನ್ನು ಸ್ಥಾಪಿಸುತ್ತದೆ.

ಈ ಒಪ್ಪಂದವು ಜರ್ಮ್‌ಪ್ಲಾಸಂ ವಿನಿಮಯ, ತಜ್ಞರ ತೊಡಗಿಸಿಕೊಳ್ಳುವಿಕೆ ಮತ್ತು ಅತ್ಯಾಧುನಿಕ ಕೃಷಿ ತಂತ್ರಜ್ಞಾನಗಳಲ್ಲಿ ತರಬೇತಿಯನ್ನು ಸಹ ಒಳಗೊಂಡಿರುತ್ತದೆ. ಭಾರತ ಮತ್ತು ಅರ್ಜೆಂಟೀನಾ ಎಣ್ಣೆಬೀಜಗಳು ಮತ್ತು ದ್ವಿದಳ ಧಾನ್ಯಗಳು ಹತ್ತಿ ಕೊಯ್ಲು ಯಂತ್ರೋಪಕರಣಗಳು ಮತ್ತು ಡ್ರೋನ್‌ಗಳು ಸೇರಿದಂತೆ ಕೃಷಿ ಯಾಂತ್ರೀಕರಣದಲ್ಲಿ ಸಹಕಾರವನ್ನು ಆಳಗೊಳಿಸುತ್ತಿವೆ ಎಂದು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಹೇಳಿದೆ. ಭಾರತ-ಅರ್ಜೆಂಟೀನಾ ವೈಜ್ಞಾನಿಕ ಪಾಲುದಾರಿಕೆಗೆ ಎರಡೂ ಕಡೆಯವರು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು ಮತ್ತು ಈ ಸಹಯೋಗದ ಪರಿಣಾಮಕಾರಿ ಅನುಷ್ಠಾನ ಮತ್ತು ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ವಾರ್ಷಿಕ ಮೇಲ್ವಿಚಾರಣೆ ಮತ್ತು ಪರಿಶೀಲನೆಗೆ ಒಪ್ಪಿಕೊಂಡರು ಎಂದು ಸಚಿವಾಲಯ ತಿಳಿಸಿದೆ.

<><><><>

ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಇಂದು ಲೋಕಸಭೆಯಲ್ಲಿ 'ವಿಕಸಿತ ಭಾರತ- ಖಾತರಿ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್: ವಿಕಸಿತ ಭಾರತ - ಜಿ ರಾಮ್ ಜಿ ಮಸೂದೆ ೨೦೨೫' ರ ಚರ್ಚೆಗೆ ಉತ್ತರಿಸಲಿದ್ದಾರೆ. ಲೋಕಸಭೆಯು ನಿನ್ನೆ, ತಡರಾತ್ರಿಯವರೆಗೆ ವಿಕಸಿತ ಭಾರತ - ಜಿ ರಾಮ್ ಜಿ ಮಸೂದೆ ೨೦೨೫ ರ ಚರ್ಚೆಯನ್ನು ಪೂರ್ಣಗೊಳಿಸಿತು. ಈ ಶಾಸನವು ಇಪ್ಪತ್ತು ವರ್ಷ ಹಳೆಯದಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ- ೨೦೦೫ ಅನ್ನು ಬದಲಾಯಿಸುತ್ತದೆ. ಈ ಮಸೂದೆಯು ೨೦೪೭ ರ ವೇಳೆಗೆ ವಿಕಸಿತ ಭಾರತದ ರಾಷ್ಟ್ರೀಯ ದೃಷ್ಟಿಕೋನಕ್ಕೆ ಹೊಂದಿಕೆಯಾಗುವ ಗ್ರಾಮೀಣ ಅಭಿವೃದ್ಧಿ ಚೌಕಟ್ಟನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಶಾಸನದಡಿಯಲ್ಲಿ, ಪ್ರತಿ ಹಣಕಾಸು ವರ್ಷದಲ್ಲಿ ಕೌಶಲ್ಯರಹಿತ ಗ್ರಾಮೀಣ ಕುಟುಂಬಗಳ ಸದಸ್ಯರಿಗೆ ೧೨೫ ದಿನಗಳ ಕೂಲಿ ಉದ್ಯೋಗದ ಶಾಸನಬದ್ಧ ಖಾತರಿಯನ್ನು ಒದಗಿಸಲಾಗುತ್ತದೆ.

<><><><>

ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಮತ್ತು ಪ್ರಗತಿ ವಿಧೇಯಕ ೨೦೨೫ ಅನ್ನು ಲೋಕಸಭೆ ಅಂಗೀಕರಿಸಿದೆ. ಜನರ ಕಲ್ಯಾಣಕ್ಕಾಗಿ ಪರಮಾಣು ವಿದ್ಯುತ್ ಉತ್ಪಾದನೆಗಾಗಿ ಪರಮಾಣು ಶಕ್ತಿ ಮತ್ತು ಅಯಾನೀಕರಿಸುವ ವಿಕಿರಣವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಈ ಮಸೂದೆ ಹೊಂದಿದೆ.

ಅದರ ಸುರಕ್ಷಿತ ಬಳಕೆಗಾಗಿ ಇದು ದೃಢವಾದ ನಿಯಂತ್ರಕ ಚೌಕಟ್ಟನ್ನು ಒದಗಿಸಲು ಸಹ ಪ್ರಯತ್ನಿಸುತ್ತದೆ. ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯನ್ನು ರಚಿಸಲು ಮತ್ತು ಪರಮಾಣು ಶಕ್ತಿ ಪರಿಹಾರ ಸಲಹಾ ಮಂಡಳಿಯನ್ನು ಸ್ಥಾಪಿಸಲು ಮಸೂದೆ ಪ್ರಯತ್ನಿಸುತ್ತದೆ. ಪರಮಾಣು ಘಟನೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಹೊಣೆಗಾರಿಕೆಯನ್ನು ಸಹ ಮಸೂದೆ ಒದಗಿಸುತ್ತದೆ.

<><><>

ಭಾರತ-ಯುಎಇ ಜಂಟಿ ಮಿಲಿಟರಿ ಸಮರಾಭ್ಯಾಸ 'ಡೆಸರ್ಟ್ ಸೈಕ್ಲೋನ್'ನ ಎರಡನೇ ಆವೃತ್ತಿಯಲ್ಲಿ ಭಾಗವಹಿಸಲು ಭಾರತೀಯ ಸೇನಾ ತುಕಡಿಯು ಯುನೈಟೆಡ್ ಅರಬ್ ಎಮಿರೇಟ್ಸ್ ತಲುಪಿದೆ. ಇಂದಿನಿಂದ ಆರಂಭವಾಗುವ ಈ ಸಮರಾಭ್ಯಾಸವು ಇದೇ ೨೦ ರವರೆಗೆ ಮುಂದುವರಿಯಲಿದೆ. ಪ್ರಾಥಮಿಕವಾಗಿ ದಿ ಮೆಕನೈಸ್ಡ್ ಇನ್‌ಫೆಂಟ್ರಿ ರೆಜಿಮೆಂಟ್‌ನ ಬೆಟಾಲಿಯನ್‌ನ ೪೫ ಯೋಧರನ್ನು ಒಳಗೊಂಡಿರುವ ಭಾರತೀಯ ತುಕಡಿಯು ಈ ಸಮರಾಭ್ಯಾಸದಲ್ಲಿ ಭಾಗವಹಿಸಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><>

ಕಳೆದ ದಶಕದಲ್ಲಿ ದೇಶವು ಪ್ರತಿಯೊಂದು ವಲಯದಲ್ಲೂ ಅಗಾಧ ಬೆಳವಣಿಗೆಯನ್ನು ಕಂಡಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಭಾರತೀಯ ಆರ್ಥಿಕ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರವು ಆರ್ಥಿಕ ಸೇರ್ಪಡೆ, ಕಾರ್ಯಪಡೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ಕುಟುಂಬಗಳಿಗೆ ಹಣಕಾಸು ಮತ್ತು ಬ್ಯಾಂಕಿಂಗ್ ಪ್ರವೇಶವನ್ನು ಖಚಿತಪಡಿಸುವುದರ ಜೊತೆಗೆ ಪೌಷ್ಠಿಕಾಂಶವನ್ನು ಸುಧಾರಿಸಿದೆ ಎಂದು ತಿಳಿಸಿದ್ದಾರೆ. ಸರ್ಕಾರವು ಸಾಮಾನ್ಯ ನಾಗರಿಕರಿಗೆ ಸರ್ಕಾರ ನಿರ್ಧರಿಸಿದ ಪ್ರೀಮಿಯಂಗಳಲ್ಲಿ ಮೂಲಭೂತ ಕನಿಷ್ಠ ವಿಮೆಯನ್ನು ಖಾತ್ರಿಪಡಿಸಿದೆ. ಸರ್ಕಾರ ಸಣ್ಣ ಉದ್ಯಮಿಗಳಿಗೆ ಸಹಾಯ, ರಸ್ತೆಗಳನ್ನು ಹೆದ್ದಾರಿಗಳಿಗೆ ಸಂಪರ್ಕಿಸುವುದು, ಮಾರುಕಟ್ಟೆ ಪ್ರವೇಶವನ್ನು ಸುಧಾರಿಸುವುದು ಮತ್ತು ಸಮಗ್ರ ಆರೋಗ್ಯ ರಕ್ಷಣೆಯನ್ನು ಖಚಿತಪಡಿಸಿಕೊಳ್ಳುವತ್ತ ಗಮನಹರಿಸಿದೆ ಎಂದು ಹೇಳಿದ್ದಾರೆ.

ಧ್ವನಿ : ನಿರ್ಮಲಾ ಸೀತಾರಾಮನ್ (೪೧ ಸೆಕೆಂಡ್‌ಗಳು)

<><><>

ಸಾಂಪ್ರದಾಯಿಕ ಟೋಲ್ ಸಂಗ್ರಹ ವ್ಯವಸ್ಥೆಯನ್ನು ಬದಲಿಸಲು ಮುಂದಿನ ವರ್ಷದ ಅಂತ್ಯದ ವೇಳೆಗೆ ದೇಶಾದ್ಯಂತ ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು ಎಂದು ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ರಾಜ್ಯಸಭೆಯಲ್ಲಿ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವರು, ಹೆದ್ದಾರಿಗಳಲ್ಲಿ ವಾಹನಗಳ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸಾರಿಗೆ ಸಮಯವನ್ನು ಕಡಿಮೆ ಮಾಡಲು ಸರ್ಕಾರ ಇದನ್ನು ಜಾರಿಗೆ ತರುತ್ತಿದೆ ಎಂದು ಹೇಳಿದ್ದಾರೆ.

<><><><>

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಐದು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯ, ನಿನ್ನೆ ಲಕ್ನೋದ ಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಬೇಕಿತ್ತು. ಆದರೆ, ದಟ್ಟ ಮಂಜಿನ ಹಿನ್ನೆಲೆಯಲ್ಲಿ ಪಂದ್ಯ ರದ್ದಾಗಿದೆ.

<><><><>

ಚೀನಾದ ಹ್ಯಾಂಗ್‌ಝೌನಲ್ಲಿ ನಡೆಯಲಿರುವ ಬಿಡಬ್ಲ್ಯೂಎಫ್ ಬ್ಯಾಡ್ಮಿಂಟನ್ ವರ್ಲ್ಡ್ ಟೂರ್ ಪಂದ್ಯಾವಳಿಯ ಸೆಮಿಫೈನಲ್‌ನಲ್ಲಿ, ಭಾರತದ ಪುರುಷರ ಡಬಲ್ಸ್ ಜೋಡಿ- ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಇಂದು ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಶೋಹಿಬುಲ್ ಫಿಕ್ರಿ ಅವರನ್ನು ಎದುರಿಸಲಿದ್ದಾರೆ. ಭಾರತೀಯ ಜೋಡಿಯು ತಮ್ಮ ಮೊದಲ ಬಿ ಗುಂಪಿನ ಪಂದ್ಯದಲ್ಲಿ ಚೀನಾದ ಚಾಂಗ್ ವಾಂಗ್ ಮತ್ತು ವೀ ಕೆಂಗ್ ಲಿಯಾಂಗ್ ವಿರುದ್ಧ ೧೨-೨೧, ೨೨-೨೦, ೨೧-೧೪ ಅಂತರದಲ್ಲಿ ರೋಮಾಂಚಕ ಜಯಗಳಿಸುವ ಮೂಲಕ ತಮ್ಮ ಅಭಿಯಾನವನ್ನು ಆರಂಭಿಸಿತು. ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಫೈನಲ್ಸ್ ೨೦೨೫ ರಲ್ಲಿ ಭಾರತದ ಪುರುಷರ ಡಬಲ್ಸ್ ಜೋಡಿ ದೇಶದ ಏಕೈಕ ಪ್ರತಿನಿಧಿಗಳಾಗಿವೆ. ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್, ಚೀನಾದ ಲಿಯಾಂಗ್ ಮತ್ತು ವಾಂಗ್, ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ಶೋಹಿಬುಲ್ ಫಿಕ್ರಿ ಹಾಗೂ ಮಲೇಷ್ಯಾದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ಅವರೊಂದಿಗೆ ಬಿ ಗುಂಪಿನಲ್ಲಿ ಸ್ಥಾನ ಪಡೆದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>